# ಕೂದಲಿಗೆ ಹೆನ್ನಾ ಹಚ್ಚೇರಾ..?

**ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗುವ ಹೆನ್ನಾ ಅಥವಾ ಮೆಹಂದಿ ಹಚ್ಚಿದರೆ ಕೂದಲು ನುಣುಪಾಗುತ್ತದೆ, ಹೊಳೆಯುತ್ತದೆ ಎಂಬುದು ತಪ್ಪು ನಂಬಿಕೆ.**

**■ ರೋಹಿಣಿ ಮುಂಡಾಜೆ**



ಆರೋಗ್ಯವಂತ ಕೂದಲು ದಟ್ಟವಾಗಿರದಿದ್ದರೂ ನುಣುಪಾಗಿದ್ದು ಹೊಳೆಯುತ್ತಿದ್ದರೆ ಆ ಹೆಣ್ಣು ಮಗಳು ಎಲ್ಲರ ಕಣ್ಸೆಳೆಯುತ್ತಾಳೆ. ಕೂದಲಿನ ಆರೋಗ್ಯ ಕಾಪಾಡುವುದು ಸುಲಭದ ಮಾತಲ್ಲ. ಅದೊಂದು ತಪಸ್ಸು.

ಧೂಳು, ಬಿಸಿಲು, ಮಳೆ, ಚಳಿಗೆ ದೇಹದ ಆರೋಗ್ಯದಲ್ಲಿ ಏರುಪೇರು ಆಗುವಂತೆಯೇ ಕೂದಲಿನ ಆರೋಗ್ಯದಲ್ಲಿಯೂ ವ್ಯತ್ಯಯವಾಗುತ್ತದೆ. ಆದರೆ ಅದು ಬೇಗನೆ ಗೋಚರಿಸುವುದಿಲ್ಲ. ಕೂದಲು ತುಂಬಾ ಸೂಕ್ಷ್ಮವಾದ್ದರಿಂದ ಒಂದೊಂದು ಋತುಗಳೂ ಅದರ ಆರೈಕೆಗೆ ಸವಾಲೊಡ್ಡುತ್ತಲೇ ಇರುತ್ತವೆ.

ಸಾಮಾನ್ಯವಾಗಿ, ಉಗುರು ಬೆಚ್ಚಗಿನ ಎಣ್ಣೆ ಇಲ್ಲವೇ ಬಗೆ ಬಗೆಯ ಬೇರು, ಎಲೆ, ಹೂವುಗಳ ರಸ ಬೆರೆಸಿ ತಯಾರಿಸಿದ ಎಣ್ಣೆ (ಕೈಯೆಣ್ಣೆ) ರಾತ್ರಿಯೇ ಹಚ್ಚಿ ಮಾರನೆಯ ದಿನ ಬಿಸಿ ನೀರು ಸ್ನಾನ ಮಾಡುವುದು ಅಜ್ಜಿಕಾಲದಿಂದಲೂ ರೂಢಿಯಲ್ಲಿರುವ ಪ್ರಾಥಮಿಕ 'ಚಿಕಿತ್ಸೆ'. ಆಗೊಮ್ಮೆ ಈಗೊಮ್ಮೆ ಮದರಂಗಿ (ಮೆಹೆಂದಿ/ಹೆನ್ನಾ) ಎಲೆಗಳನ್ನು ರುಬ್ಬಿ ತಲೆಗೆ ಹಚ್ಚಿಕೊಂಡು ಸಾಬೂನು/ ಸೀಗೆಪುಡಿ/ಸೀಗೆಕಾಯಿ ಹಚ್ಚದೆಯೇ ಸ್ನಾನ ಮಾಡುವುದು ಮತ್ತೊಂದು ಕ್ರಮ. ಇದೊಂದು ರೀತಿಯ ಅರೋಮ ಥೆರಪಿ. ತಾಜಾ ಮದರಂಗಿಯ ಸುವಾಸನೆಯನ್ನು ತಾವೇ ಆಸ್ವಾದಿಸುತ್ತಾ ಹೊಸ ನುಣುಪು, ರಂಗು ಪಡೆದು ಹೊಳೆಯುವ ಕೂದಲು ಬಿಸಿಲಲ್ಲಿ ಪ್ರತಿಫಲಿಸುವುದನ್ನು ಅನುಭವಿಸುವುದರಲ್ಲಿ ವಿಶಿಷ್ಟ ಸುಖವಿತ್ತು. ಸ್ವಲ್ಪ ಚಹಾ ಪುಡಿ ಮತ್ತು ಮೊಟ್ಟೆ ಲೋಳೆಯನ್ನು ಸೇರಿಸಿ ಚಹಾ ಡಿಕಾಕ್ಷನ್‌ನಲ್ಲಿ ಕಲಸಿ (ರುಬ್ಬುವಾಗಲೇ ಡಿಕಾಕ್ಷನ್ ಬಳಸಿದರೂ ಆಯಿತು) ಕಬ್ಬಿಣದ ಪಾತ್ರೆಯಲ್ಲಿ ಒಂದೆರಡು ದಿನ ಇಟ್ಟರಂತೂ ಕಡುಕಪ್ಪು ಬಣ್ಣ ಬಂತೆಂದೇ ಲೆಕ್ಕ.

ಆದರೆ ಈಗ ನಗರ/ಪಟ್ಟಣ ಪ್ರದೇಶಗಳಲ್ಲಿ ಮದರಂಗಿ ಗಿಡಗಳನ್ನು ಬೆಳೆಸಲು ಸ್ಥಳದ ಅಭಾವವೆಂದೋ, ಇಲ್ಲೆಲ್ಲ ಆ ಗಿಡಗಳು ಬೆಳೆಯುವುದಿಲ್ಲವೆಂದೋ ಸಬೂಬು ಒಂದು ಕಡೆಯಾದರೆ ಹಳ್ಳಿಯಲ್ಲಿಯೂ ಈ ಗಿಡಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿವೆ. ಕೈ ಕೆಸರು ಮಾಡಿಕೊಳ್ಳದೆ ಮೊಸರು ಬಾಯಿಗಿಟ್ಟುಕೊಳ್ಳುವ ಆಧುನಿಕ ಯುಗದಲ್ಲಿ ಗಿಡ ಬೆಳೆಸಿ ಅದನ್ನು ಆರೈಕೆ ಮಾಡಿ ಎಲೆ ಕೊಯ್ದು ರುಬ್ಬಿ ಕೈಗೆಲ್ಲ ಬಣ್ಣ ಮೆತ್ತಿಕೊಳ್ಳುವುದಕ್ಕಿಂತ ಅಂಗಡಿಯಲ್ಲಿ ಸಿಗುವ ಪೊಟ್ಟಣಗಳೇ ಸೂಕ್ತ ಎಂಬ ರಾಜಿಸೂತ್ರವೇ ಎಲ್ಲರದ್ದು.

ಕೈಯಲ್ಲಿ ಮದರಂಗಿ ವಿನ್ಯಾಸ ಬಿಡಿಸುವಾಗ ಒಂದು ಬಣ್ಣ, ಆರು ಗಂಟೆ ಕಳೆದ ಮೇಲೆ ಮತ್ತೊಂದು ಬಣ್ಣ, ಮರುದಿನಕ್ಕೆ ಬೇರೆಯದೇ ಎಂದು ಬಣ್ಣ ಬದಲಾಯಿಸುವ ಈ ರೆಡಿಮೇಡ್ ಮದರಂಗಿ ಪುಡಿಗಳು ಎಲ್ಲರಿಗೂ ಅಚ್ಚುಮೆಚ್ಚು.

ತಲೆಗೆ ಹಚ್ಚುವ ಮದರಂಗಿಯದೂ ಇದೇ ಕತೆ. ನೀರಲ್ಲಿ ಕಲಸಿ ಹಚ್ಚಿ! ಎಷ್ಟು ಗಾಢ ಬಣ್ಣ ಬೇಕೋ ಅಷ್ಟು ದೀರ್ಘಾವಧಿ ಇಟ್ಟುಕೊಂಡರೆ ತಿಳಿಗೇಸರಿಯಿಂದ ಗಾಢ ಕೇಸರಿವರೆಗಿನ ಬಣ್ಣದಲ್ಲಿ ಕೂದಲು ರಾರಾಜಿಸುತ್ತದೆ. 'ಹೆನ್ನಾ ಡೈ' ಈಗ ಟ್ರೆಂಡ್ ಆಗಿ ಬದಲಾಗುತ್ತಿದೆ. ಹೆನ್ನಾ ಎಂಬ ಸಿದ್ಧಸೂತ್ರವು ಡೈಯಲ್ಲಿರುವ ರಾಸಾಯನಿಕಗಳನ್ನು ಮರೆಸಿಬಿಡುತ್ತದೆ ಎಂಬುದೇ ಹೆನ್ನಾ ಡೈಯ ಹಿಂದಿನ ಗುಟ್ಟು.

ಹೆನ್ನಾ ಡೈ ಅಥವಾ ಮದರಂಗಿ ಹಚ್ಚುವ 'ಸಂಪ್ರದಾಯ'ದ ಬಗ್ಗೆ ಒಂದೆಡೆ ಒಲವು ಹೆಚ್ಚುತ್ತಿದ್ದರೆ ಕೇಶ ವಿನ್ಯಾಸ ಮತ್ತು ಸೌಂದರ್ಯ ತಜ್ಞರು ವ್ಯತಿರಿಕ್ತವಾದ ಅಭಿಪ್ರಾಯ ವ್ಯಕ್ತಪಡಿಸುವುದು ಮಾರುಕಟ್ಟೆಯಲ್ಲಿ ಸಿಗುವ ಮದರಂಗಿ ಪುಡಿಗಳ ಬಗೆಗಿನ ಮತ್ತೊಂದು ಆಯಾಮವನ್ನು ತೆರೆದಿಡುತ್ತದೆ.

ಇತ್ತೀಚೆಗೆ ಮುಂಬೈನಲ್ಲಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಅಂತರರಾಷ್ಟ್ರೀಯ ಖ್ಯಾತಿಯ ಕೇಶ ವಿನ್ಯಾಸಕ ಧರ್ಮೇಶ್ ಹಿಂಗೊರಾನಿ (ಡೊಡೊ) ಅವರನ್ನು ಈ ಬಗ್ಗೆ ವಿಚಾರಿಸಿದರೆ, 'ಕೃತಕ ಮೆಹೆಂದಿ ಬಳಕೆ ಕೂದಲಿನ ಆರೋಗ್ಯ ಮತ್ತು ಬಾಳಿಕೆ ದೃಷ್ಟಿಯಿಂದ ಸೂಕ್ತ ಅಲ್ಲವೇ ಅಲ್ಲ' ಎಂದು ಪ್ರತಿಕ್ರಿಯಿಸಿದರು.

ಕೇಶದ ಆರೋಗ್ಯದ ದೃಷ್ಟಿಯಿಂದ ಮೆಹೆಂದಿ ಉತ್ತಮವಾಗಿರಬಹುದು. ಆದರೆ ಮಾರುಕಟ್ಟೆಯಲ್ಲಿ ಸಿಗುವ 'ಹೆನ್ನಾ'ದಲ್ಲಿ ರಾಸಾಯನಿಕದ ಪ್ರಮಾಣ ಅಧಿಕವಿರುವ ಅಪಾಯವಿರುವುದರಿಂದ ಅದರ ಬಳಕೆ ಇನ್ನಷ್ಟು ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಂತಾದೀತು ಎಂಬುದು ಅವರ ಕಿವಿಮಾತು.

ಇದೇ ಮಾತನ್ನು ಸಮರ್ಥಿಸಿದರು ಮುಂಬೈನ ವೃತ್ತಿಪರ ಸೌಂದರ್ಯ ತಜ್ಞೆ ಶಿಲ್ಪಾ. ಮೆಹೆಂದಿ ಹಚ್ಚಿದರೆ ಕೂದಲು ನುಣುಪಾಗುತ್ತದೆ, ಹೊಳೆಯುತ್ತದೆ, ಸೊಂಪಾಗಿ ಬೆಳೆಯುತ್ತದೆ ಎಂಬುದು ತಪ್ಪು ನಂಬಿಕೆ. ರಾಸಾಯನಿಕಗಳುಳ್ಳ ಉತ್ಪನ್ನಗಳು ಕೂದಲಿನ ಆರೋಗ್ಯಕ್ಕೆ ಪೂರಕವಾಗಿರಲು ಸಾಧ್ಯವೇ ಎಂಬುದು ಅವರ ಪ್ರಶ್ನೆ.

ಮೆಹೆಂದಿಯೆಂದರೆ ನೈಸರ್ಗಿಕ ಉತ್ಪನ್ನಗಳಲ್ಲಿ ಒಂದು. ಹರ್ಬಲ್ ಎಂಬುದು ಸಾಮಾನ್ಯ ನಂಬಿಕೆ. ಆದರೆ ಗಿಡದಿಂದ ಕಿತ್ತು ರುಬ್ಬಿ ತಯಾರಿಸಿದ ಮದರಂಗಿನ ರಂಗೇ ಬೇರೆ. ಕೃತಕ ಮೆಹೆಂದಿ/ಹೆನ್ನಾದ ರಂಗೇ ಬೇರೆ. ವೇಗದ ಬದುಕಿನ ಗುಂಗಿನಲ್ಲಿ ನಮ್ಮ ಆರೋಗ್ಯಕ್ಕೆ ನಾವೇ ಸವಾಲೊಡ್ಡುವುದು ಸೂಕ್ತವಲ್ಲ ಎಂಬುದಂತೂ ಸತ್ಯ. ■